ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರ ಪಟ್ಟಿ

37.	ಶ್ರೀಮತಿ ಬಾನು ಮುಷ್ತಾಕ್	ಸಾಹಿತ್ಯ
38.	ಶ್ರೀ ಹೊ.ಶಾ. ಅರುಣ್	ಸಂಕೀರ್ಣ
39.	ಡಾ। ಸು.ನ. ಓಂಕಾರ್	ಸಂಕೀರ್ಣ
40.	ಶ್ರೀಮತಿ ಕಿರಣ್ ಮುಜಮ್‌ದಾರ್ ಷಾ	ಸಂಕೀರ್ಣ
41.	ಡಾ। ವಿ.ಆರ್. ಪಂಚಮುಖಿ	ಸಂಕೀರ್ಣ
42.	ಪ್ರೊ। ಪ್ರಭಂಜನಾಚಾರ್ಯ	ಸಂಕೀರ್ಣ
43.	ನ್ಯಾಯಮೂರ್ತಿ ಹೆಚ್.ಕೆ. ಬಾಲಕೃಷ್ಣ	ಸಂಕೀರ್ಣ
44.	ಶ್ರೀ ಜಾನ್ ಎಫ್. ವೇಕ್ ಫೀಲ್ಡ್	ಸಂಕೀರ್ಣ
45.	ಶ್ರೀ ಶಸಿಸಾಲಿ	ಸಂಕೀರ್ಣ
46.	ಶ್ರೀ ಶಿವನೇಗೌಡರು	ಸಂಕೀರ್ಣ
47.	ಡಾ। ಸರೋಜಿನಿ ಶಿಂತ್ರಿ	ಸಂಕೀರ್ಣ
48.	ಶ್ರೀ ಹೊಸಹಳ್ಳಿ ಕೇಶವಮೂರ್ತಿ	ಸಂಗೀತ
49.	ಶ್ರೀ ರವೀಂದ್ರ ಜಿ. ಹಂದಿಗನೂರು	ಸಂಗೀತ
50.	ಶ್ರೀ ರೇವಣಪ್ಪ ಕುಂಕುಮಗಾರ್	ಸಂಗೀತ
51.	ಶ್ರೀಮತಿ ಡಿ. ಶಶಿಕಲಾ	ಸಂಗೀತ
52.	ಶ್ರೀ ಬಸಪ್ಪ ಶಿರೂರ್	ಸ್ವಾತಂತ್ರ್ಯ ಹೋರಾಟಗಾರರು
53.	ಶ್ರೀ ಟಿ.ಆರ್. ರೇವಣ್ಣ	ಸ್ವಾತಂತ್ರ್ಯ ಹೋರಾಟಗಾರರು
54.	ಶ್ರೀ ಎಂ.ಎ. ಲತೀಫ್	ಹೊರನಾಡ ಕನ್ನಡಿಗರು
55.	ಕರ್ನಾಟಕ ವಿದ್ಯಾವರ್ಧಕ ಸಂಘ	ಸಂಸ್ಥೆಗಳು
56.	ಬಹರೇನ್ ಕನ್ನಡ ಸಂಘ	ಸಂಸ್ಥೆಗಳು
57.	ಸೋಫಿಯಾ ಬುದ್ದಿ ಮಾಂದ್ಯರ ಶಾಲೆ	ಸಂಸ್ಥೆಗಳು
58.	ಶ್ರೀ ಅಣ್ಣಾ ಬಾಳಾಜಿ ಬೆಡಗೆ	ಸ್ವಾತಂತ್ರ್ಯ ಹೋರಾಟಗಾರರು

ಚಿಕ್ಕಮಗಳೂರು ಜಿಲ್ಲಾ ಪಂಚಾಯ್ತಿ ಮುಖ್ಯ ರಸ್ತೆಗಳ ಅಭಿವೃದ್ಧಿ

4109 (4555) : ಶ್ರೀ ನೀಲಕಂಠಪ್ಪ ಬಿ.ಆರ್ (ತರೀಕೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಮುಖ್ಯರಸ್ತೆ ವಿವರವನ್ನು ತಾಲ್ಲೂಕುವಾರು ನೀಡುವುದು;

ಆ) ಮೂರು ವರ್ಷಗಳಲ್ಲಿ ಎಷ್ಟು ಜಿಲ್ಲಾ ಮುಖ್ಯ ರಸ್ತೆಗಳನ್ನು ನಿರ್ಮಿಸಲಾಗಿದೆ; ಹಾಗೂ ಎಷ್ಟು ಕಿಲೋ ಮೀಟರ್ ಪೂರ್ಣ ಡಾಂಬರೀಕರಣ ಮಾಡಲಾಗಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯಲ್ಲಿ ಜಿಲ್ಲಾ ಮುಖ್ಯ ರಸ್ತೆಗಳು ಯಾವುದೂ ಇರುವುದಿಲ್ಲ.

ಆ) ಹೊಸದಾಗಿ ಯಾವುದೇ ಜಿಲ್ಲಾ ಮುಖ್ಯ ರಸ್ತೆಗಳನ್ನು ನಿರ್ಮಾಣ ಮಾಡಿರುವುದಿಲ್ಲ. ಜಿಲ್ಲೆಯಲ್ಲಿರುವ 1251 ಕಿಮೀ. ಜಿಲ್ಲಾ ಮುಖ್ಯ ರಸ್ತೆಗಳ ಪೈಕಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ಯೋಜನೆಗಳಡಿಯಲ್ಲಿ 302 ಕಿಮೀ ರಸ್ತೆಯನ್ನು ಡಾಂಬರೀಕರಣ ಮಾಡಲಾಗಿದೆ.

ಹುಣಸೂರು ಕ್ಷೇತ್ರದಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಕಟ್ಟಡ ನಿರ್ಮಾಣ

4111 (4723) : ಶ್ರೀ ಪಾಪಣ್ಣ ವಿ. (ಹುಣಸೂರು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಣಸೂರು ಕ್ಷೇತ್ರದಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಎಷ್ಟು; (ವಿವರ ನೀಡುವುದು)

ಆ) ಕಟ್ಟಡವೇ ಇಲ್ಲದ ಶಾಲೆ ಹಾಗೂ ಒಂದೊಂದೇ ಕೊಠಡಿಯಿರುವ ಶಾಲೆಗಳಿಗೆ ಆದ್ಯತೆ ಕೊಟ್ಟು ಕಟ್ಟಡ ಮಂಜೂರಾತಿ ಮಾಡಲು ಜಿಲ್ಲಾ ಪಂಚಾಯತಿ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ,. ಈ ತಾರತಮ್ಯ ಹೋಗಲಾಡಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು;

ಪ್ರೊ। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು): ಅ) ಹುಣಸೂರು ಕ್ಷೇತ್ರದಲ್ಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ವಿವರಗಳು ಈ ಕೆಳಕಂಡಂತಿವೆ.

ಸರ್ಕಾರಿ ಪ್ರಾಥಮಿಕ ಶಾಲೆಗಳು		ಸರ್ಕಾರಿ ಪ್ರೌಢಶಾಲೆಗಳು
ಕಿರಿಯ	ಹಿರಿಯ	
168	110	16

ಆ) ಕಟ್ಟಡವಿಲ್ಲದೇ ಇರುವ ಪ್ರಾಥಮಿಕ ಶಾಲೆಗಳು–4 ಹಾಗೂ ಪ್ರೌಢಶಾಲೆಗಳು–2, ಒಂದೊಂದೇ ಕೊಠಡಿ ಇರುವ ಪ್ರಾಥಮಿಕ ಶಾಲೆಗಳು–33.

ಹುಣಸೂರು ಕ್ಷೇತ್ರದಲ್ಲಿನ ಕಟ್ಟಡರಹಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಕಳೆದ 3 ವರ್ಷಗಳಿಂದ ರಾಜ್ಯ ಯೋಜನೆಯಡಿ, ಪ್ರಧಾನಮಂತ್ರಿ ಗ್ರಾಮೋದಯ ಯೋಜನೆಯಡಿ, ಕಮ್ಯುಹಲಗೆ ಕಾರ್ಯಕ್ರಮದಡಿ, ಜಿಲ್ಲಾ ಪಂಚಾಯತ್ ಯೋಜನೆಯಡಿ, ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ. ಆದುದರಿಂದ ಕಟ್ಟಡ ಮಂಜೂರಾತಿ ಮಾಡಲು ಜಿಲ್ಲಾ ಪಂಚಾಯತಿ ವಿಫಲವಾಗಿರುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ "ಬಿಸಿ ಊಟ" ಕಾರ್ಯಕ್ರಮ

4113 (4708) : ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಸಿ ಊಟ ಕಾರ್ಯಕ್ರಮ ಜಾರಿಗೆ ಬಂದಿದ್ದು, ಒಟ್ಟು ಎಷ್ಟು ವಿದ್ಯಾರ್ಥಿಗಳು ಇತರ ಪ್ರಯೋಜನವನ್ನು ಪಡೆಯುತ್ತಿದ್ದಾರೆ; (ಜಿಲ್ಲಾವಾರು ವಿವರ ನೀಡುವುದು)

ಆ) 14.7.2003ರವರೆಗೆ ಈ ಕಾರ್ಯಕ್ರಮದಡಿಯಲ್ಲಿ ಎಷ್ಟು ವಿದ್ಯಾರ್ಥಿಗಳು ಅಸ್ವಸ್ಥರಾಗಿದ್ದಾರೆ;

ಇ) ಅಸ್ವಸ್ಥರಾಗುವುದಕ್ಕೆ ಕಾರಣಗಳೇನು;

ಈ) ಈ ರೀತಿ ಆಗದಂತೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?